ಜೇನು ನೊಣಗಳಿಗೆ ಬರುವ ಕೀಟಗಳು ಹಾಗೂ ರೋಗಗಳು

ಜೇನುನೊಣಗಳು ಮತ್ತು ಪರಕೀಯ ಪರಾಗಸ್ಪರ್ಶವು ಸಸ್ಯಗಳ ವಂಶಾಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಪರಕೀಯ ಪರಾಗಸ್ಪರ್ಶ ಹೊಂದಲು ನೀರು, ಗಾಳಿ, ಪ್ರಾಣಿ, ಪಕ್ಷಿಗಳು ಹಾಗೂ ಕೀಟಗಳು ಬಹು ಮುಖ್ಯ, ಅದರಲ್ಲೂ ಕೀಟಗಳಿಂದ ನಡೆಯುವ ಪರಾಗಸ್ಪರ್ಶವೇ ಅಧಿಕ, ಅಂತಹ ಕೀಟಗಳಲ್ಲಿ ಜೇನುನೊಣಗಳು ಪರಾಗಸ್ಪರ್ಶ ಕಾರ್ಯದಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತವೆ. ಇಂತಹ ಜೇನುನೊಣಗಳನ್ನು ಸಾಕಾಣಿಕೆ ಮಾದಬೇಕಾದರೆ ಅನೇಕ ತೊಂದರೆಗಳೂ ಸಹ ಎದುರಾಗುತ್ತವೆ. ಅದರಲ್ಲಿ ರೋಗಗಳು ಹಾಗೂ ಕೀಟಗಳೂ ಒಂದು.

ಮೇಣಪತಂಗ: ಮೇಣ ತಿನ್ನುವ ಪತಂಗಗಳಲ್ಲಿ ಎರಡು ಪ್ರಭೇದಗಳಿವೆ. ಒಂದು ದೊಡ್ಡದು ಮತ್ತೊಂದು ಸಣ್ಣದು. ದೊಡ್ಡ ಪ್ರಭೇದದ ಕೀಟನಾಮ ಗ್ಯಾಲ್ಲೆರಿಯಾ ಮೆಲ್ಲೊನೆಲ್ಲಾ, ಸಣ್ಣ ಪ್ರಭೇದದ ಕೀಟನಾಮ ಅಕ್ರೊಯಿಯ ಗ್ರಿಸೆಲ್ಲ ಎಂಬುದಾಗಿದೆ. ದೊಡ್ಡ ಪತಂಗವು ಹೆಚ್ಚು ಪ್ರಮಾಣದ ಹಾನಿ ಉಂಟುಮಾಡುತ್ತದೆ ಮತ್ತು ಇದರ ಹೆಣ್ಣು ಪತಂಗಗಳು ಬಿರುಕುಗಳಲ್ಲಿ ಖಾಲಿ ಎರಿಗಳ ಮೇಲೆ ಮೊಟ್ಟೆ ಇಡುತ್ತವೆ. ಈ ಮೊಟ್ಟೆಗಳು ನೋಡಲು ಗಸಗಸೆ ಬೀಜದಂತಿರುತ್ತವೆ. ಎಂಟು ದಿನಗಳಲ್ಲಿ ಈ ಮೊಟ್ಟೆಗಳು ಒಡೆದು ಮರಿಹುಳುಗಳು ಮೇಣದ ಚೂರುಗಳು ಮತ್ತು ಎರಿಗಳನ್ನು ತಿನ್ನಲು ಪ್ರಾರಂಬಿಸುತ್ತವೆ. 6–7 ವಾರಗಳಲ್ಲಿ ಜೀವನ ಚಕ್ರ ಪೂರ್ಣಗೊಳ್ಳುತ್ತದೆ.ಸಣ್ಣ ಪತಂಗಗಳ ಹಾನಿಯ ಪ್ರಮಾಣ ಕಡಿಮೆ ಮತ್ತು ಇವುಗಳು ತೀರಾ ಬಲಹೀನಗೊಂಡ ಜೇನು ಕುಟುಂಬಗಳಲ್ಲಿ ಕಂಡುಬರುತ್ತದೆ.

ಹತೋಟಿ ಕ್ರಮಗಳು

- ಜೇನು ಪೆಟ್ಟಿಗೆಗಳನ್ನು 15 ದಿನಗಳಿಗೊಮ್ಮೆ ಪರೀಕ್ಷಿಸಿ ತಳ ಭಾಗದ ಹಲಿಗೆಗಳನ್ನು ಸ್ವಚ್ಛಗೊಳಿಸಬೇಕು.
- ಜೇನುನೊಣಗಳು ಖಾಲಿ ಇರುವ ಚೌಕಟ್ಟುಗಳನ್ನು ತೆಗೆದು ಎರಿಗಳನ್ನು ಗಾಳಿಯಾಡದ ಕೋಣೆಯಲ್ಲಿಟ್ಟು ಇಥಿಲಿನ್ ಡೈಬ್ರೋಮೈಡ್ ಉದುರಿಸಬೇಕು.
- ತೀರಾ ಹಳೆಯದಾದ ಹಾಗೂ ಹಾನಿಗೊಳಗಾದ ಎರಿಗಳನ್ನು ಆಗಿಂದಾಗ್ಗೆ ತೆಗೆಯುತ್ತಿರಬೇಕು.
- ಪೆಟ್ಟಿಗೆಯ ಬಿರುಕು ಮತ್ತು ಸಂದುಗಳನ್ನು ಸುಣ್ಣ ಮತ್ತು ಗಂದಕದ ಪುಡಿ ಬೆರೆಸಿ ತಯಾರಿಸಿದ ಸರಿಯಿಂದ ಮುಚ್ಚಬೇಕು.

ಕಡಜಿಗ

ಇವುಗಳು ಜೇನುನೊಣಗಳನ್ನು ಹಿಡಿದು ತಿನ್ನುತ್ತವೆ. ಇವುಗಳು ಮರ, ರೆಂಬೆಗಳಲ್ಲಿ ಇಲ್ಲವೇ ಗೊಡೆಗಳಲ್ಲಿ ಕಾಗದದ ಗೂಡುಗಳನ್ನು ನಿರ್ಮಿಸಿ ಗುಂಪಾಗಿ ವಾಸಮಾಡುತ್ತವೆ. ಅವುಗಳ ಪೈಕಿ ಶರೀರದ ಮೇಲೆ ಕಂದು ಬಣ್ಣದ ಹಳದಿ ಪಟ್ಟಿಗಳಿರುವ ಪ್ರಭೇದಗಳು ಹಾನಿಕರ.ಹೆಣ್ಣು ಕಡಜಿಗಗಳು ಚಳಿಗಾಲ ಮುಗಿದು ವಸಂತ ಕಾಲದಲ್ಲಿ ಗರ್ಭಧರಿಸಿ ಹೊಸ ಗೂಡುಗಳನ್ನು ಕಟ್ಟುತ್ತವೆ. ಮುಖ್ಯವಾಗಿ ಕಡಜಿಗಗಳು ಹೂಗಳಲ್ಲಿ ಹಾರಾಡುತ್ತಿರುತ್ತವೆ ಇಲ್ಲವೇ ಹುಟ್ಟಿನ ಬಳಿ ಹಾರುವ ಜೇನು ನೊಣಗಳನ್ನು ಹಿಡಿದು ತಿನ್ನುತ್ತವೆ.

ಹತೋಟಿ ಕ್ರಮಗಳು

- ಕಡಜಿಗಳ ಗೂಡುಗಳನ್ನು ನಾಶಗೊಳಿಸಬೇಕು ಅದರ ಸಲುವಾಗಿ ರಾತ್ರಿ ಹೊತ್ತು ಬೆಂಕಿ ಹಾಕಿ ಹೊಗೆ ಎಬ್ಬಿಸಬೇಕು.
- ಪ್ರತಿ ಕಡಜಿಗದ ಗೂಡಿಗೆ ಒಂದು ಅಲ್ಯೂಮಿನಿಯಂ ಫಾಸ್ಫೈಡ್ ಗುಳಿಗೆಯನ್ನು ಹಾಕಬಹುದು ಇಲ್ಲವೆ ಕೀಟನಾಶಕವನ್ನು ಸಿಂಪಡಿಸಬಹುದು. ಸಿಂಪರಣೆಗೆ ಕ್ಲೋರ್‌ಪೈರಿಫಾಸ್ ಇಲ್ಲವೆ ಧೂಳಿಕರಿಸಲು ಡೆಲ್ಟಾಮೆತ್ರಿನ್ ಪೌಡರ್ ಕೀಟನಾಶಕವನ್ನು ಬಳಸಬಹುದು.
- ಕಡಜದ ಬೋನುಗಳನ್ನು ಜೇನುಕುಟುಂಬದ ದ್ವಾರದಲ್ಲಿ ಇಡುವುದರಿಂದಲೂ ತಡೆಯಬಹುದು.

ಇರುವೆಗಳು

ಇರುವೆಗಳು ಜೇನುನೊಣಗಳ ಮರಿಗಳು, ಪರಾಗ ಹಾಗೂ ಜೇನುತುಪ್ಪವನ್ನು ತಿನ್ನುತ್ತವೆ. ಇರುವೆಗಳು ಮರಗಳಲ್ಲಿ ಗೂಡುಗಳನ್ನು ನಿರ್ಮಿಸಿ ಇಲ್ಲವೆ ನೆಲದೊಳಗೆ ಗೂಡುಕಟ್ಟಿ ಸಂತತಿಯನ್ನು ಅಭಿವೃದ್ಧಿಪಡಿಸಿ ಹಾನಿ ಮಾಡುತ್ತಿರುತ್ತವೆ.

ಹತೋಟಿ ಕ್ರಮಗಳು

- ಇರುವೆ ಗೂಡುಗಳನ್ನು ಪತ್ತೆಹಚ್ಚಿ ನಾಶ ಮಾಡುವುದು.
- ಜೇನು ಪಟ್ಟಿಗೆಯ ಕಾಲುಗಳನ್ನು ನೀರಿನ ಪಾತ್ರೆಯಲ್ಲಿ ನಿಲ್ಲಿಸಬೇಕು.
- ಜೇನು ಪಟ್ಟಿಗೆಯ ಸುತ್ತಲು ಕೀಟನಾಶಕದ (ಕ್ಲೋರ್‌ಪೈರಿಫಾಸ್ ಅಥವಾ ಮೆಲಾಥಿಯಾನ್ 5 ಮಿ.ಲಿ. ಪ್ರತಿ ಲೀ. ನೀರಿಗೆ) ದ್ರಾವಣವನ್ನು ಸುರಿದು ಇಲ್ಲವೆ ಪುಡಿಯನ್ನು ಉದುರಿಸಬೇಕು.

ನುಶಿ

ನುಶಿಗಳು ಪ್ರಾಯದ ಕೆಲಸಗಾರ ನೊಣಗಳ ಹಾಗೂ ರಾಣಿನೊಣದ ಉಸಿರಾಟದ ನಳಿಕೆಯಲ್ಲಿದ್ದುಕೊಂಡು ಅಲ್ಲಿ ಲಭಿಸುವ ರಸವನ್ನು ಹೀರುತ್ತವೆ. ನುಶಿಯ ಭಾದೆಗೊಳಗಾದ ನೊಣಗಳಿಗೆ ಹಾರಾಡಲು ಸಾಧ್ಯವಾಗುವುದಿಲ್ಲ.

ಹತೋಟಿ ಕ್ರಮಗಳು

- ಈ ರೋಗದ ಸೋಂಕನ್ನು ತಡೆಗಟ್ಟಲು ಸ್ಯಾಪ್ರಲ್ ಎಣ್ಣೆ, ನೈಟ್ರೋಬೆಂಜಿನ್ ಮತ್ತು ಪೆಟ್ರೋಲ್ ಎಣ್ಣೆಗಳನ್ನು 1:2:2 ರಂತೆ ಬೆರಸಿ ಮಿಶ್ರಣವನ್ನು ರೋಗಕ್ಕೀಡಾದ ಜೇನು ನೊಣದ ಮೇಲೆ ಬಿಡಬೇಕು.
- ಒದೊಂದು ಜೇನು ಪಟ್ಟಿಗೆಗೆ 200 ಮಿ. ಗ್ರಾಂ ಗಂಧಕದ ಪುಡಿಯನ್ನು ಪ್ರತಿ 50 ದಿನಗಳಿಗೊಮ್ಮೆ ಚೌಕಟ್ಟುಗಳ ಮೇಲೆ ಉದರಿಸಬೇಕು.
- ಮಿಥೈಲ್ ಸ್ಯಾಲಿಸಿಲೇಟ್‌ನ್ನು ಸಹ ಬಳಸಬಹುದು.

ರೋಗಗಳು

- ಜೇನುನೊಣಗಳಿಗೆ ಸೋಂಕುವ ರೋಗಳನ್ನು ಮರಿ ಜೇನುನೊಣದ ರೋಗಗಳು ಮತ್ತು ಪ್ರೌಢ ಜೇನುನೊಣದ ರೋಗಗಳು ಎರಡು ವಿಧಗಳಾಗಿ ವಿಂಗಡಿಸಲಾಗಿದೆ.

ಮರಿ ಜೇನುನೊಣದ ರೋಗಗಳು

ಅ) ಅಮೇರಿಕನ್ ಫೌಲ್ ಬ್ರೂಡ್ ರೋಗ: ಈ ರೋಗವು ಬ್ಯಾಸಿಲಸ್ ಲಾರ್ವೆ ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ. ಮರಿಹುಳುಗಳು ಕೋಶಾವಸ್ಥೆಯನ್ನು ತಲುಪುವ ಹಂತದಲ್ಲಿ ಈ ರೋಗ ಕಾಣಿಸಿಕೊಳ್ಳುತ್ತದೆ.ಇದರಿಂದ ಜೇನುನೊಣದ ಮರಿಗಳು ಕಪ್ಪು ಬಣ್ಣಕ್ಕೆ ಮಾರ್ಪಡುತ್ತವೆ. ಕಡ್ಡಿಯಿಂದ ಚುಚ್ಚಿ ಮೇಲಕ್ಕೆಳದರೆ ನೂಲಿನ ಎಳೆಯಂತ ಮಾಂಸದ ಭಾಗ ಅದರೊಂದಿಗೆ ಬರುತ್ತದೆ.ದಿನ ಕಳೆದಂತೆ ಹುಟ್ಟಿನ ತುಂಬಾ ಕೆಟ್ಟವಾಸನೆ ಬರುತ್ತದೆ.

ಹತೋಟಿ ಕ್ರಮಗಳು

ಟೆಟ್ರಾಮೈಸಿನ್ ಆಂಟಿಬಯೋಟಿಕ್ ಗುಳಿಗೆಗಳನ್ನು ಸಕ್ಕರೆ ಪಾಕದಲ್ಲಿ ಕರಗಿಸಿ ಜೇನುಕುಟುಂಬಗಳಿಗೆ ಕೊಡಬೇಕು. ಸಮ ಪ್ರಮಾಣದ ಸಕ್ಕರೆ ಮತ್ತು ನೀರನ್ನು ಬೆರೆಸಿ ಒಂದು ಲೀಟರ್ ದ್ರಾವಣವನ್ನು ತಯಾರಿಸಿ, ಕುದಿಸಿ ಆರಿಸಿ ಅದಕ್ಕೆ 100 ಗ್ರಾಂ ಟೆಟ್ರಾಮೇಸಿನ್ ಹಾಕಿ ಕರಗಿಸಬೇಕು. 150–300ಮಿ.ಲೀ. ದ್ರಾವಣನ್ನು ಪ್ರತಿ ಕುಟುಂಬಕ್ಕೆ ವಾರಕ್ಕೊಮ್ಮೆ ಸುಮಾರು 6–7 ಬಾರಿ ಕೊಡಬೇಕು.

ಆ) ಯುರೋಪಿಯನ್ ಫೌಲ್ ಬ್ರೂಡ್ ರೋಗ: ಈ ರೋಗವು ಮೇಲಿಸ್ಸೋಕಾಕಸ್ ಪ್ಲೂಟಾನ್ ಎಂಬ ಪ್ರಾಣಿಶ್ಚಿತ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ. ರೋಗಪಿಡಿತ ಮರಿಗಳು ಹಳದಿ ಬಣಕ್ಕೆ ಮಾರ್ಪಡುತ್ತವೆ. ದಿನ ಕಳೆದಂತೆ ಒಣಗಿ ಸಾವನ್ನುಪ್ಪುತ್ತವೆ.

ಹತೋಟಿ ಕ್ರಮಗಳು

ಟೆಟ್ರಾಮೈಸಿನ್ ಬಳಸಿ ನಿಯಂತ್ರಿಸಬಹುದು ಅಥವಾ 0.5ಗ್ರಾಂ ಆಕ್ಸಿಟೆಟ್ರಾಸೈಕ್ಲಿನನ್ನು 500 ಮಿ.ಲೀ. ಸಕ್ಕರೆ ಪಾಕದಲ್ಲಿ ಮಿಶ್ರಣಮಾಡಿ ನೀಡುವುದರಿಂದ ನಿಯಂತ್ರಿಸಬಹುದು.

ಇ. ಥೈಸ್ಯಾಕ್ ಬ್ರೂಡ್ ನಂಜುರೋಗ

ಈ ರೋಗವು ಟಿ.ಎಸ್.ಬಿ.ವಿ. ಎಂಬ ರೋಗಾಣುವಿನಿಂದ ಉಂಟಾಗುತ್ತದೆ.ಸೋಂಕು ತಗುಲಿದ ಮರಿಹುಳುಗಳು ಹಾಗೂ ಕೋಶಾವಸ್ಥೆಯಲ್ಲಿನ ಹುಳುಗಳು ಸಾಯುತ್ತವೆ. ಹೀಗೆ ಸತ್ತ ಮರಿಹುಳುಗಳು ನಸು ಹಳದಿ ಬಣ್ಣಕ್ಕೆ ತಲುಪುತ್ತವೆ.

ಹತೋಟಿ ಕ್ರಮಗಳು

ರೋಗಪೀಡಿತ ಹುಳುಗಳನ್ನು ಸುಟ್ಟು ನಾಶಗೊಳಿಸುವುದು.

ರೋಗಪೀಡಿತ ಹುಟ್ಟುಗಳನ್ನು ಶೇಕಡಾ 3 ರ ಫಾರ್ಮಲಿನ ದ್ರಾವಣದಿಂದ ತೊಳೆದು ಸ್ವಚ್ಛಗೊಳಿಸಬೇಕು.

ಎಬಾವೈರಸ್ (ನಂಜುನಾಶಕ) ಔಷದಿ ಬಳಸಿದಲ್ಲಿ ಹತೋಟಿ ಮಾಡಬಹುದು.

2) ಪ್ರಾಯದ ನೊಣಗಳಿಗೆ ಹಾನಿಮಾಡುವ ರೋಗಗಳು

ಅ) ನೋಸಿಮ

ಇದು ನೋಸಿಯ ಏಪಿಸ್ ಎಂಬ ರೋಗಾಣುವಿನಿಂದ ಸಂಭವಿಸುತ್ತದೆ.ಇದು ಆಮಶಂಕೆಯನ್ನು ಉಂಟುಮಾಡುವ ರೋಗವಾಗಿದೆ.ಈ ರೋಗಕ್ಕೆ ತುತ್ತಾದ ಕೆಲಸಗಾರ ನೊಣಗಳು ನೀರಿನಿಂದ ಕೂಡಿದ ಮಲವಿಸರ್ಜನೆ ಮಾಡಿದಾಗ ದುರ್ವಾಸನೆ ಹರಡುತ್ತದೆ. ಹಾನಿಗೀಡಾದ ನೊಣಗಳ ಹೊಟ್ಟೆ ಊದಿಕೊಂಡಿರುತ್ತದೆ. ಈ ರೋಗವಿದ್ದ ಗೂಡುಗಳಲ್ಲಿ ರಾಣಿ ನೊಣ ಮೊಟ್ಟೆ ಇಡುವುದಿಲ್ಲ. ಸಾಮಾನ್ಯವಾಗಿ ಈ ರೋಗವು ಚಳಿಯಿಂದ ಕೂಡಿದ ಪ್ರದೇಶಗಳಲ್ಲಿ ಜಾಸ್ತಿ ಕಾಣಿಸಿಕೊಳ್ಳುತ್ತದೆ.

ಹತೋಟಿ ಕ್ರಮಗಳು

- ವಾತಾವರಣದ ಉಷ್ಣತೆಯನ್ನು ಹೆಚ್ಚಿಸಬೇಕು.
- ಜೇನುಹುಟ್ಟಿನಲ್ಲಿ ತೇವಾಂಶ ಇರದಂತೆ ನೋಡಿಕೊಳ್ಳಬೇಕು.
- ರೋಗಪೀಡಿತ ಕುಟುಂಬಗಳನ್ನು ಪ್ರತ್ಯೇಕಿಸಬೇಕು.

100 ಮಿ.ಲೀ.ಸಕ್ಕರೆ ಪಾಕದೊಂದಿಗೆ 0.3–0.5 ಮಿ.ಗ್ರಾಂ ಫ್ಯೂಮ್ಯಜಿನಲ್ ಅನ್ನು ಬೆರೆಸಿ ಕೊಡುವುದರಿಂದ ಈ ರೋಗವನ್ನು ನಿಯಂತ್ರಿಸಬಹುದು.

ಆ) ಗುಂಪುಗೊಳ್ಳುವ ರೋಗ

ಇದು ಇರಿಡೋ ವೈರಸ್ ಎಂಬ ನಂಜುರೋಗಾಣುವಿನಿಂದ ಸಂಭವಿಸುತ್ತದೆ.ರೋಗಪೀಡಿತ ನೊಣಗಳು ಚಟುವಟಿಕೆಯನ್ನು ಕಳೆದುಕೊಂಡು ಮಂಕಾಗಿ, ಬಲಹೀನಗೊಂಡು ಗೂಡಿನ ಒಳಗೆ ಇಲ್ಲವೇ ಪೆಟ್ಟಿಗೆಯ ಹೊರಭಾಗದಲ್ಲಿ ಗುಂಪು ಗುಂಪಾಗಿ ಕುಂಟುತ್ತಾ ನಡೆದಾಡುತ್ತಿರುತ್ತವೆ. ಇದರ ಹತೋಟಿಗೆ ಸೂಕ್ತ ಔಷಧಿ ಲಭ್ಯವಿಲ್ಲದಿರುವುದರಿಂದ ರೋಗವನ್ನು ಮೊದಲೇ ಪತ್ತೆಹಚ್ಚಿ ಅಂತಹ ಹುಟ್ಟುಗಳನ್ನು/ಗೂಡುಗಳನ್ನು ಪ್ರತ್ಯೇಕಿಸಬೇಕು.

ಲೇಖಕರು : ಡಾ.ಶ್ರೀವಾಣಿ ಜಿ ಎನ್
ಡಾ.ತಿಮ್ಮಣ್ಣ
ಇಂ.ವೀಣಾ ಟಿ
ಡಾ.ಮಲ್ಲಾರೆಡ್ಡಿ
ಡಾ.ವೀಣಾ ಕಂಬಳಿ
ಡಾ.ಉಮೇಶ್ ಬಾಬು
ಡಾ.ಅಫ್ಸಾನಾ ಬಾನು

ಪ್ರಕಾಶಕರು : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ,
ರಾಯಚೂರು

ಗೌರವ ಸಲಹೆಗಾರರು: ಡಾ. ಎ.ಆರ್. ಕುರುಬರ
ವಿಸ್ತರಣಾ ನಿರ್ದೇಶಕರು

UASR/PC/LL-32B/2025-26

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ,
ರಾಯಚೂರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಜೇನು ನೊಣಗಳಿಗೆ ಬರುವ ಕೀಟಗಳು ಹಾಗೂ ರೋಗಗಳು





2025-26

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ಅಂಚೆ ಪೆಟ್ಟಿಗೆ ಸಂಖ್ಯೆ–329, ರಾಯಚೂರು–584104
ದೂರವಾಣಿ ಸಂಖ್ಯೆ: 0832–220196

ಶುಲ್ಕ ರಹಿತ ರೈತರ ಸಹಾಯವಾಣಿ ಸಂಖ್ಯೆ:
1800–425–0470